. ತೆಂಗಿನ ಗರಿ ತಿನ್ನುವ ಕಪ್ಪು ತಲೆ ಹುಳುವಿನ ನಿಯಂತ್ರಣೆಗಾಗಿ ಪರೋಪ ಜೀವಿಗಳನ್ನು ಉತ್ಪಾದಿಸಿ ಉಚಿತವಾಗಿ ರೈತರಿಗೆ ಒದಗಿಸಲಾಗುತ್ತಿದೆ.

ಇ). ಸರ್ವೇಕ್ಷಣಾ ತಂಡದ ಚಟುವಟಿಕೆಗಳನ್ನು ತೀವ್ರಗೊಳಿಸಲಾಗುವುದು.

. ಪ್ರಮುಖ ಬೆಳೆಗಳಿಗೆ ಬೀಳುವ ಕೀಟ ಮತ್ತು ರೋಗಗಳ ನಿರ್ವಾಹಣೆಯ ಸಂಶೋಧನೆಗೆ ವಿಶೇಷ ಒತ್ತು ನೀಡಲಾಗುವುದು.

. ಕೀಟ ಮತ್ತು ರೋಗಗಳ ನಿರ್ವಹಣೆಗಾಗಿ ಹೆಚ್ಚಿನ ತರಬೇತಿಗಳನ್ನು ಹಮ್ಮಿಕೊಳ್ಳಲಾಗುವುದು

. ತುರ್ತು ಸಂದರ್ಭಗಳಲ್ಲಿ ಇಲಾಖೆಯ ವಿಶೇಷ ತಂಡಗಳು ತೋಟಗಳಿಗೆ ಭೇಟಿ ನೀಡಿ ರೈತರ ನೆರವಿನೊಂದಿಗೆ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ರೋಗಗಳಿಂದ ಬೆಳೆ ನಷ್ಟ

4695 (5395) : ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್. (ಚಾಮರಾಜ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಬೆಳೆಯುವ ಬೆಳೆಗಳ ಪೈಕಿ ಯಾವ ಯಾವ ಬೆಳೆಗಳಿಗೆ ಯಾವ ಯಾವ ರೀತಿಯ ರೋಗ ತಗುಲಿ ಎಷ್ಟೆಷ್ಟು ಪ್ರಮಾಣದ ನಷ್ಟ ಉಂಟಾಯಿತು.

ಆ) ಈ ರೋಗಗಳ ತಡೆಗೆ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿತ್ತು. ಇದರಿಂದಾದ ನಷ್ಟಕ್ಕೆ ರೈತರಿಗೆ ಯಾವ ರೀತಿಯ ಅನುಕೂಲ ಕಲ್ಪಿಸಿಕೊಡಲಾಯಿತು;

ಇ) ರೋಗ ತಡೆಗೆ ಇನ್ನು ಯಾವ ರೀತಿಯ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ಶಿವಣ್ಣ (ಕೃಷಿ ಸಚಿವರು)

ಅ) ರಾಜ್ಯದಲ್ಲಿ ಬೆಳೆಯುವ 28 ಕೃಷಿ ಬೆಳೆಗಳಲ್ಲಿ ಏಕದಳ ಧಾನ್ಯಗಳಾದ ಭತ್ತ ಜೋಳ, ಗೋಧಿ ಬೆಳೆಗಳಿಗೆ ಎಲೆ ಚುಕ್ಕೆ ರೋಗ, ಬೆಂಕಿ ರೋಗ ಮತ್ತು ತುಕ್ಕು ರೋಗ ಬರುತ್ತದೆ. ದ್ವಿದಳ ಧಾನ್ಯ ಬೆಳೆಗಳಾದ ತೊಗರಿ ಅಲಸಂದೆ ಉದ್ದು ಮತ್ತು ಹೆಸರು ಬೆಳೆಗಳಿಗೆ ಎಲೆಚುಕ್ಕೆ ರೋಗ, ಬೂಜು ರೋಗ ಮತ್ತು ನಂಜು ರೋಗ ಬರುತ್ತದೆ. ಎಣ್ಣೆಕಾಳು ಬೆಳೆಗಳಾದ ಶೇಂಗಾ ಸೋಯಾ ಅವರೆ ಮತ್ತು ಸೂರ್ಯಕಾಂತಿ ಬೆಳೆಗಳಿಗೆ ಎಲೆ ಚುಕ್ಕೆ ರೋಗ ಮತ್ತು ನಂಜು ರೋಗ ಬರುತ್ತದೆ. ವಾಣಿಜ್ಯ ಬೆಳೆಗಳಾದ ಹತ್ತಿಗೆ ಎಲೆ ಚುಕ್ಕೆ ರೋಗ, ಕಬ್ಬಿನ ಬೆಳೆಗೆ ಲಿಡ್ ರಾಟ್ ಮತ್ತು ತಂಬಾಕು ಬೆಳೆಗೆ ಎಲೆ ಚುಕ್ಕೆ ರೋಗ ಹಾಗೂ ನಂಜು ರೋಗ ಬರುತ್ತದೆ.

ರಾಜ್ಯದಲ್ಲಿ ಇಲ್ಲಿಯವರೆವಿಗೂ ಕಾಣಿಸಿಕೊಂಡಿರುವ ಬೆಳೆ ರೋಗಗಳಿಂದ ಆರ್ಥಿಕ ನಷ್ಟ ಉಂಟು ಮಾಡುವ ಹಂತ ತಲುಪಿರುವುದಿಲ್ಲ. ಸಕಾಲದಲ್ಲಿ ನಿಯಂತ್ರಣ ಕ್ರಮ ಕೈಗೊಳ್ಳುತ್ತಿರುವುದರಿಂದ, ಸಸ್ಯ ರೋಗಗಳಿಂದ ಬೆಳೆ ನಷ್ಟವಾಗಿರುವ ಬಗ್ಗೆ ವರದಿಯಾಗಿರುವುದಿಲ್ಲ.

ಆ) ರೋಗ ಬಾಧೆ ಕಂಡು ಬಂದಾಗ ವಿವಿಧ ಯೋಜನೆಗಳಡಿಯಲ್ಲಿ ಇಲಾಖೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿ ಮತ್ತು ಸಸ್ಯ ಸಂರಕ್ಷಣಾ ಉಪಕರಣಗಳನ್ನು ವಿತರಿಸಿ ರೋಗಗಳನ್ನು ಹತೋಟಿ ಮಾಡಲು ಸಕಾಲಿಕ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಜಿಲ್ಲಾ ಮಟ್ಟದ ಕೃಷಿ ವಿಜ್ಞಾನಿಗಳನ್ನೊಳಗೊಂಡ ಸರ್ವೇಕ್ಷಣಾ ತಂಡ ರಚಿಸಲಾಗಿದೆ. ಈ ತಂಡದ ಶಿಫಾರಸ್ಸುಗಳನ್ವಯ ಯಾವುದೇ ರೋಗ ಬಾಧೆ ನಿಯಂತ್ರಣ ಮಾಡಲು ಜಿಲ್ಲಾ ಮಟ್ಟದಲ್ಲಿ

ವಿಶೇಷ ಅನುದಾನವಾಗಿ ರೂ. 1.00 ಲಕ್ಷ ಮೀಸಲಾಗಿಟ್ಟಿರುವುದಲ್ಲದೆ ವಿವಿಧ ಯೋಜನೆಗಳಲ್ಲೂ ಸಹ ಅನುದಾನ ಲಭ್ಯವಿರುತ್ತದೆ. ಅಧಿಕ ಅನುದಾನ ಬೇಕಾದಲ್ಲಿ ಅವಶ್ಯಕತೆಗನುಗುಣವಾಗಿ ಕೇಂದ್ರ ಕಚೇರಿಯಿಂದ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. ಈ ವ್ಯವಸ್ಥೆಯಿಂದ ರೋಗ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಮಾಡಲಾಗುತ್ತಿದೆ.

ಅಗರಬತ್ತಿ ಅಂಡ್ ಆದರ್ಸ್ ಗೃಹ ನಿರ್ಮಾಣ ಸಹಕಾರ ಸಂಘ

4696 (5432) : ಶ್ರೀ ಶಿವಣ್ಣನವರ್, ಬಸವರಾಜ್ ನೀಲಪ್ಪ (ಹಾವೇರಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಗರಬತ್ತಿ ವರ್ಕ್ಸ ಅಂಡ್ ಆದರ್ಸ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತವು ಸ್ಥಾಪಿತವಾಗಿ 20 ವರ್ಷ ಕಳೆದಿದ್ದರೂ ಯಾವುದೇ ನಿವೇಶನ ಸದಸ್ಯರುಗಳಿಗೆ ಹಂಚಿಕೆ ಮಾಡದಿದ್ದರೂ ಈವರೆಗೆ ಮುಂದುವರೆಸಲು ಕಾರಣವೇನು?

ಆ) ಕರ್ನಾಟಕ ಉಚ್ಚ ನ್ಯಾಯಾಲಯ ರಿಟ್ ಅರ್ಜಿ 31576:1998 ಮತ್ತು 316101 ಮತ್ತು 31602:98ರ ದಿನಾಂಕ: 16.7.1999ರ ಆದೇಶದಲ್ಲಿ 3 ತಿಂಗಳೊಳಗಾಗಿ ಸಂಘವನ್ನು ಸಮಾಪನೆ ಮಾಡಲು ಆದೇಶಿಸಿದ್ದರೂ ಸಹ ಅದಕ್ಕೆ ವ್ಯತಿರಿಕ್ತವಾಗಿ ಮುಂದುವರೆಸಲು ಯಾರು ಕಾರಣ?

ಇ) ಸಂಘದ ಹೆಸರಿನಲ್ಲಿ ಪದಾಧಿಕಾರಿಗಳು ಅವ್ಯವಹಾರ ನಡೆಸಿದ್ದರೂ ಅವರ ಮೇಲೆ ಕಾನೂನು ಕ್ರಮ ಜರುಗಿಸದಿರಲು ಕಾರಣರಾರು?

ಈ) ಈ ಸಂಘವನ್ನು ಇಲ್ಲಿಯವರೆಗೆ ಮುಂದುವರೆಸಿರುವುದರಿಂದ ಸರ್ಕಾರಕ್ಕೆ ಆದ ನಷ್ಟವೆಷ್ಟು; ಈ ಸಂಘವನ್ನು ಈಗಲಾದರೂ ಸಮಾಪನೆಗೊಳಿಸಲು ಕ್ರಮ ಜರುಗಿಸುವರೆ

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಅಗರಬತ್ತಿ ವರ್ಕರ್ಸ್ ಅಂಡ್ ಅದರ್ಸ್ ಗೃಹ ನಿರ್ಮಾಣ ಸಹಕಾರ ಸಂಘವು ನೋಂದಣಿಯಾದಾಗಿನಿಂದ ತನ್ನ ಸದಸ್ಯರಿಗೆ ಯಾವುದೇ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ. ಆದರೆ ಈ ಸಂಘವು ನಿವೇಶನ ಹಂಚಿಕೆ ಮಾಡುವ ದೃಷ್ಟಿಯಿಂದ, ಬೆಂಗಳೂರು ಉತ್ತರ ತಾಲ್ಲೂಕು, ಚಿಕ್ಕಬೆಟ್ಟಹಳ್ಳಿ ಗ್ರಾಮದಲ್ಲಿ 4.16 1/2 ಎಕರೆ ಜಮೀನು ಖರೀದಿಸಿದ್ದು, ಜಮೀನಿನ ಬಗ್ಗೆ ತಕರಾರುಗಳು ಉದ್ಭವಿಸಿದ್ದು ಬೆಂಗಳೂರು ನಗರ ಸಿವಿಲ್ ನ್ಯಾಯಾಲಯದ ದಾವೆ ಸಂಕ್ಯೆ: 5540:90 ಓ ಎನ್ 3341:92 ಗಳಲ್ಲಿ ದಿನಂಕ: 11.4.2000 ರಂದು ಸಂಘದ ಪರ ತೀರ್ಮಾನವಾಗಿದ್ದು ಈ ಆದೇಶವನ್ನು ಪ್ರಶ್ನಿಸಿ ಎದುರು ಪಕ್ಷದವರು ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ಆರ್.ಎಫ್.ಎ.ಎನ್. ಅರ್ಜಿ ಸಂಖ್ಯೆ:523:2001 ರಂತೆ ಅಪೀಲು ಹೂಡಿದ್ದು ವಜ್ಞಚಾರಣೆ ಹಂತದಲ್ಲಿರುತ್ತದೆ. ಈ ಜಮೀನು ಸಂಘದ ಪರವಾಗಿ ತೀರ್ಮಾನವಾದಲ್ಲಿ ಬಡಾವಣೆ ನಿರ್ಮಿಸುವ ಮತ್ತು ಸದಸ್ಯರಿಗೆ ನಿವೇಶನ ಹಂಚುವ ಕ್ರಮಕ್ಕಾಗಿ ಸಂಘವು ಮುಂದುವರಿಯಬಹುದಾಗಿದೆ. ಆದರೂ ಈ ಸಂಘವು ತನ್ನ ಉದ್ದೇಶ ಈಡೇರಿಸದೇ ಇದ್ದ ಕಾರಣ ದಿನಾಂಕ:26.11.97 ರಂದು ಸಮಾಪನಗೊಳಿಸಲಾಗಿತ್ತು, ಆದರೆ ನ್ಯಾಯಾಲಯದ ಆದೇಶದಂತೆ ದಿನಾಂಕ: 7.1.2000 ರಂದು ಪುನ:ಶ್ಚೇತನಗೊಳಿಸಲಾಗಿದ್ದು ಸಂಘವು ಇಲ್ಲಿಯವರೆಗೆ ಮುಂದುವರೆಸಿದೆ.

ಆ) ಈ ಸಂಘದ ಸಮಾಪನಾ ಆದೇಶದ ವಿರುದ್ಧ ಸಂಘದ ಆಡಳಿತ ಮಂಡಳಿಯವರು ಗೌರವ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ : 31576:98ರ ಪ್ರಕಾರ ನ್ಯಾಯಾಲಯವು ದಿನಾಂಕ: 9.8.1999 ರಂದು ತೀರ್ಮ ನೀಡಿ ಈ ತೀರ್ಪಿನಲ್ಲಿ ಸಂಘವು ನೀಡಿರುವ